೫) ಒಬ್ಬನೇ ಭಗವಂತನಿಗೆ ಅನಂತ ನಾಮಗಳು, ಅನಂತ ರೂಪಗಳು. ಆತನನ್ನು ಯಾವ ನಾಮ, ರೂಪದ ಮೂಲಕ ಕರೆದರೂ ಇರುವ ಒಬ್ಬನೇ ಭಗವಂತನು ಕಾಣಿಸಿಕೊಳ್ಳುವನು.

೬) ಒಂದು ಊರಿಗೆ ಹೋಗಲು ಹಲವು ದಾರಿಗಳಿರುವಂತೆ, ಭಗವಂತನೆಡೆಗೆ ಹೋಗಲು ಹಲವು ಮತಗಳಿವೆ. ಯಾವ ಮತವನ್ನು ಅನುಸರಿಸಿದರೂ ಒಬ್ಬನೇ ಭಗವಂತನನ್ನು ಪಡೆಯಬಹುದು – **"ಎಷ್ಟು ಮತಗಳೋ ಅಷ್ಟು ಪಥಗಳು."**

೭) ಒಬ್ಬನು ಮನೆಯ ಮೇಲಕ್ಕೆ ಏಣಿ, ಬೊಂಬು, ಮೆಟ್ಟಿಲು, ಹಗ್ಗ – ಹೀಗೆ ಯಾವುದೋ ಒಂದರ ಮೂಲಕವಾಗಿ ಹತ್ತಿ ಹೋಗುವಂತೆ, ದೇವರನ್ನು ಸೇರುವುದಕ್ಕೆ ಹಲವು ವಿಧಾನಗಳಿವೆ. ಪ್ರಪಂಚದಲ್ಲಿರುವ ಪ್ರತಿಯೊಂದು ಮತವೂ ಒಂದೊಂದು ದಾರಿಯನ್ನು ತೋರಿಸುತ್ತದೆ.

೮) ಹಿಂದೂಗಳು ಮತ್ತು ಬ್ರಾಹ್ಮಸಮಾಜದವರು ತಮ್ಮ ತಮ್ಮ ಸಿದ್ಧಾಂತಗಳನ್ನು ಪ್ರಚಾರ ಮಾಡುತ್ತಿದ್ದ ಸಮಯ ಅದು. ಆಗ ಶ್ರೀರಾಮಕೃಷ್ಣರನ್ನು ಯಾರೋ ಒಬ್ಬರು ಎರಡೂ ಮತಗಳ ಬಗ್ಗೆ ತಮ್ಮ ಅಭಿಪ್ರಾಯವೇನೆಂದು ಕೇಳಿದರು. ಇದಕ್ಕೆ ಶ್ರೀರಾಮಕೃಷ್ಣರು, "ನನ್ನ ಜಗನ್ಮಯಿ ಆಕೆಯ ಕೆಲಸಗಳನ್ನು ಇಬ್ಬರ ಮೂಲಕವಾಗಿಯೂ ಮಾಡಿಸುತ್ತಿರುವಳು" ಎಂದು ಹೇಳಿದರು.

೯) ಗ್ಯಾಸಿನ ಬೆಳಕು (Gas light) ಊರಿನ ಹಲವು ಕಡೆ ಹಲವು ರೀತಿಯಲ್ಲಿ ಪ್ರಕಾಶಿಸುವುದು. ಆದರೆ ಈ ಬೆಳಕಿಗೆ ಮೂಲವಾದ ಅನಿಲ ಬರುವುದು ಒಂದೇ ಕಡೆಯಿಂದ. ಇದರಂತೆಯೇ ಎಲ್ಲ ದೇಶದ, ಎಲ್ಲ ಕಾಲದ ಧಾರ್ಮಿಕ ಗುರುಗಳು ಹಲವು ದೀಪಗಳಂತೆ ಇದ್ದಾರೆ. ಆದರೆ ಅವರಲ್ಲಿರುವ ಆತ್ಮನ ಬೆಳಕು ಒಂದೇ ಭಗವಂತನ ಮೂಲದಿಂದ ಅನವರತವೂ ಪ್ರಕಟವಾಗಿ ರಂಜಿಸುವುದು. ಎಲ್ಲಾ ನರಿಗಳ ಕೂಗು ಒಂದೇ. ಇದರಂತೆಯೇ ಎಲ್ಲ ಮಹಾತ್ಮರ ಉಪದೇಶವೂ ಒಂದೇ ಬಗೆಯದು!

### ಮತಾಂಧತೆಗೆ ಕಾರಣ ಮತ್ತು ಪರಿಹಾರ

೧) ಅಜ್ಞಾನಿಯಾದ ಬದ್ಧಜೀವನು ತನ್ನ ಧರ್ಮವೇ ಶ್ರೇಷ್ಠ ಎಂದು ನಂಬಿರುವನು; ಆದರೆ ನಿಜವಾದ ಜ್ಞಾನವನ್ನು ಸಂಪಾದಿಸಿಕೊಂಡ ನಂತರ ಅವನಿಗೆ ಎಲ್ಲಾ ಧರ್ಮಗಳೂ ಶ್ರೇಷ್ಠವೇ ಎಂದು ಗೊತ್ತಾಗುವುದು.

೨) ಪರಮಹಂಸರು ಜಗನ್ಮಾತೆಯೊಡನೆ ಮಾತನಾಡುತ್ತಾ ಹೀಗೆ ಹೇಳಿಕೊಳ್ಳುತ್ತಿದ್ದರು: "ಎಲ್ಲರೂ ಹೇಳುತ್ತಾರೆ, ತಮ್ಮ ಗಡಿಯಾರ ಸರಿಯಾಗಿ ನಡೆಯುತ್ತಿದೆ ಎಂಬುದಾಗಿ. ಕ್ರೈಸ್ತ, ಬ್ರಾಹ್ಮ, ಹಿಂದು, ಮುಸಲ್ಮಾನ – ಎಲ್ಲರೂ ಹೇಳುತ್ತಾರೆ, ತಮ್ಮ ಧರ್ಮವೇ ಸರಿ ಎಂಬುದಾಗಿ. ಆದರೆ ತಾಯೆ, ಯಾರ ಗಡಿಯಾರವೂ ಸರಿಯಾಗಿ ನಡೆಯುತ್ತಿಲ್ಲ. ನಿನ್ನನ್ನು ಸರಿಯಾಗಿ ಯಾರು ತಾನೆ ಅರಿಯಬಲ್ಲರು? ಆದರೆ ವ್ಯಾಕುಲತೆಯಿಂದ ನಿನ್ನನ್ನು ಕರೆದರೆ, ನೀನು ಕೃಪೆ ಮಾಡುವುದಾದರೆ, ಎಲ್ಲ ಮಾರ್ಗಗಳಿಂದಲೂ ನಿನ್ನನ್ನು ಸೇರಬಹುದು."

೩) ಒಮ್ಮೆ ಒಬ್ಬ ಒಂದು ತೋಪಿನ ಕಡೆ ಹೋಗಿದ್ದ. ಅಲ್ಲಿನ ಮರವೊಂದರ ಮೇಲೆ ಒಂದು ಪ್ರಾಣಿ ಕಾಣಿಸಿಕೊಂಡಿತು. ಆತ ಬಂದು ಇನ್ನೊಬ್ಬನಿಗೆ ಹೀಗೆ ಹೇಳಿದ: "ನೋಡು, ಆ ಮರದ ಮೇಲೆ ಕೆಂಪು ಬಣ್ಣದ ಪ್ರಾಣಿಯನ್ನು ನೋಡಿ ಬಂದೆ." ಅವನು ಹೇಳಿದ, "ನಾನು ಅಲ್ಲಿ ಹೋಗಿದ್ದಾಗ, ಅದನ್ನು ನೋಡಿ ಬಂದಿದ್ದೇನೆ; ಅದು ಕೆಂಪು ಹೇಗಾದೀತು? ಅದು ಹಸಿರು." ಹತ್ತಿರ ನಿಂತಿದ್ದ ಮತ್ತೊಬ್ಬ ಹೇಳಿದ, "ಇಲ್ಲ, ಇಲ್ಲ, ಅದನ್ನು ನಾನೂ ನೋಡಿದ್ದೇನೆ, ಅದರ ಬಣ್ಣ ಹಳದಿ." ಹೀಗೆ ಅಲ್ಲಿ ನಿಂತಿದ್ದವರು ಅದರ ಬಣ್ಣ ಬೂದು, ನೇರಳೆ, ನೀಲಿ ಇತ್ಯಾದಿ ಹೇಳಲಾರಂಭಿಸಿದರು. ಕೊನೆಗೆ ಅವರ ನಡುವೆ ಜಗಳ ಹತ್ತಿಕೊಂಡುಬಿಟ್ಟಿತು. ಕೊನೆಗೆ ಒಂದು ಇತ್ಯರ್ಥಕ್ಕೆ ಬರಲು ಅವರೆಲ್ಲರೂ ಆ ಮರದ ಹತ್ತಿರ ಹೋದರು. ಒಬ್ಬ ಮನುಷ್ಯ ಆ ಮರದ ಕೆಳಗೆ ಕುಳಿತುಕೊಂಡಿರುವುದು ಅವರ ಕಣ್ಣಿಗೆ ಬಿತ್ತು. ಆತನನ್ನು ಆ ಪ್ರಾಣಿಯ ಬಣ್ಣದ ಬಗ್ಗೆ ಕೇಳಲಾಗಿ ಆತ ಹೀಗೆ ಹೇಳಿದ: "ನಾನು ಈ ಮರದ ಕೆಳಗೇ ವಾಸಿಸುತ್ತಿದ್ದೇನೆ. ಆ ಪ್ರಾಣಿಯ ಸ್ವರೂಪ ನನಗೆ ಚೆನ್ನಾಗಿ ಗೊತ್ತಿದೆ. ನೀವು ಪ್ರತಿಯೊಬ್ಬರು ಹೇಳುತ್ತಿರುವುದೂ ಸತ್ಯವೇ. ಕೆಲವು ವೇಳೆ ಅದು ಕೆಂಪಾಗಿ, ಇನ್ನು ಕೆಲವು ವೇಳೆ ಹಸಿರಾಗಿ, ಮತ್ತೆ ಕೆಲವು ವೇಳೆ ಹಳದಿಯಾಗಿ ಮತ್ತು ಕೆಲವು ವೇಳೆ ನೀಲಿಯಾಗಿ – ಹೀಗೆ ಇನ್ನೂ ಅನೇಕ ಬಣ್ಣಗಳಾಗಿ ಕಾಣಿಸಿಕೊಳ್ಳುತ್ತದೆ. ಅದಕ್ಕೆ 'ಗೋಸುಂಬೆ' ಅಂತ ಹೆಸರು. ಒಂದೊಂದು ವೇಳೆ ಅದಕ್ಕೆ ಯಾವ ಬಣ್ಣವೂ ಇರುವುದಿಲ್ಲ."

ಈ ಕಥೆಯನ್ನು ಹೇಳಿ ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ : "ಇದೇ ರೀತಿ ಯಾರು ಸರ್ವದಾ ಭಗವಚ್ಚಿಂತನೆ ಮಾಡುತ್ತ ಇರುತ್ತಾರೋ ಅವರಿಗೆ ಮಾತ್ರ ಗೊತ್ತಾಗುತ್ತದೆ, ಭಗವಂತನ ನಿಜ ಸ್ವರೂಪ ಏನು ಎಂಬುದು. ಅವರಿಗೆ ಮಾತ್ರವೇ ಗೊತ್ತಾಗುತ್ತದೆ, ಭಗವಂತ ನಾನಾ ರೂಪಗಳಿಂದ, ನಾನಾ ಭಾವಗಳಿಂದ ಕಾಣಿಸಿಕೊಳ್ಳುತ್ತಾನೆ ಎನ್ನುವುದು. ಆತ ಸಗುಣನೂ ಹೌದು, ನಿರ್ಗುಣನೂ ಹೌದು ಮತ್ತು ಇನ್ನೂ ಏನೇನೋ ಆಗಿರುವನೋ, ಅದು ಅವನಿಗೇ ಗೊತ್ತು."

ಶ್ರದ್ಧಾವಂತ ಸಾಧಕರಿಗೆ ಶ್ರೀರಾಮಕೃಷ್ಣರು ನೀಡುವ ಕರೆ ಇದು: **"ವಾದಿಸಬೇಡ, ನಿನ್ನ ಶ್ರದ್ಧೆ ಮತ್ತು ಅಭಿಪ್ರಾಯದ ಮೇಲೆ ನೀನು ಹೇಗೆ ಅಚಲವಾಗಿ ನಿಂತಿರುವೆಯೋ, ಉಳಿದವರಿಗೆ ಕೂಡ ಅವರವರ ಶ್ರದ್ಧೆ ಹಾಗೂ ಅಭಿಪ್ರಾಯಗಳ ಮೇಲೆ ನಿಲ್ಲುವ ಸ್ವಾತಂತ್ರ್ಯವನ್ನು ಕೊಡು. ಬರಿಯ ವಾದದಿಂದ ಮತ್ತೊಬ್ಬರ ತಪ್ಪುಗಳನ್ನು ಅವರಿಗೆ ತಿಳಿಯುವಂತೆ ನೀನು ಮಾಡಲಾರೆ. ದೇವರ ಅನುಗ್ರಹ ಲಭಿಸಿದರೆ ಪ್ರತಿಯೊಬ್ಬರೂ ತಮ್ಮ ತಪ್ಪನ್ನು ತಿಳಿದುಕೊಳ್ಳುವರು."**

# ಕರ್ಮಯೋಗ ಮತ್ತು ಶ್ರೀರಾಮಕೃಷ್ಣರು

ಬ್ರಹ್ಮಚಾರಿ ಸುವಿಮಲಚೈತನ್ಯ

ಶ್ರೀರಾಮಕೃಷ್ಣರು ಭಗವಂತನನ್ನು ಒಲಿಸಿಕೊಳ್ಳುವ ಅಂಗವಾಗಿ ಕರ್ಮಯೋಗಕ್ಕೆ ಉತ್ತೇಜನ ಕೊಡುತ್ತಿದ್ದರು. ನಿಷ್ಕಾಮ ಭಾವನೆಯಿಂದ ಮಾಡುವ ಕರ್ಮವು ಆಧ್ಯಾತ್ಮಿಕ ಪ್ರಗತಿಗೆ ಅನುವು ಮಾಡಿಕೊಡುತ್ತದೆ. ಈ ಅಂಶವನ್ನು ವಿಶದವಾಗಿ, ಉದಾಹರಣೆಗಳ ಮೂಲಕ ಬಿಂಬಿಸಿರುವ ಲೇಖಕರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ತಮಿಳುನಾಡಿನ ದೇವಸ್ಥಾನವೊಂದರಲ್ಲಿ ಸಾಧುಗಳೊಬ್ಬರು ಬಹುಕಾಲದಿಂದಲೂ ನೆಲಸಿದ್ದರು. ಅವರು ಯಾವುದೇ ಕೆಲಸವನ್ನೂ ಮಾಡುತ್ತಿರಲಿಲ್ಲ. ಬದಲಾಗಿ ಸುಮ್ಮನೆ ಕುಳಿತಿರುತ್ತಿದ್ದರು. ದೇವಸ್ಥಾನದಿಂದ ನಿತ್ಯವೂ ಪ್ರಸಾದವನ್ನು ಪಡೆದು ಹಸಿವನ್ನು ಇಂಗಿಸಿಕೊಳ್ಳುತ್ತಿದ್ದರು. ಹೀಗಿರಲು ಆ ದೇವಸ್ಥಾನದ ಉಸ್ತುವಾರಿಯನ್ನು ನೋಡಿಕೊಳ್ಳಲು ಸರ್ಕಾರದಿಂದ ನಿಯೋಜಿತರಾಗಿದ್ದ ಅಧಿಕಾರಿಗಳಿಗೆ ವರ್ಗಾವಣೆಯಾಗಿ, ಹೊಸಬರೊಬ್ಬರು ಬಂದರು. ಹೊಸ ಅಧಿಕಾರಿಗಳಿಗೆ ಹೆಚ್ಚು ಕಾರ್ಯದಕ್ಷತೆಯಿಂದ ತಮ್ಮ ಕೆಲಸಗಳನ್ನು ನಿರ್ವಹಿಸಬೇಕೆಂಬ ಹಂಬಲ. ದೇವಸ್ಥಾನದ ಲೆಕ್ಕಪತ್ರಗಳನ್ನು ಅವರು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದರು. ಅಲ್ಲಿಯ ಆಗುಹೋಗುಗಳನ್ನು ಗಮನಿಸಿ ಅಗತ್ಯಬಿದ್ದಲ್ಲಿ ಸರಿಪಡಿಸುತ್ತಿದ್ದರು. ಒಮ್ಮೆ, ದೇವಸ್ಥಾನದಲ್ಲಿ ಪ್ರಸಾದ ವಿತರಣೆಯ ಪಟ್ಟಿಯನ್ನು ಅವಗಾಹಿಸುತ್ತಿದ್ದರು. ಪಟ್ಟಿಯಲ್ಲಿ, 'ಸಾಧುವಿಗೆ ಎರಡು ದೊನ್ನೆ ಪ್ರಸಾದ' ಎಂದು ಬರೆದಿತ್ತು. ಆಶ್ಚರ್ಯದಿಂದ ವಿಚಾರಿಸಿದಾಗ, ಸಿಬ್ಬಂದಿವರ್ಗದವರು "ದೀರ್ಘಕಾಲದಿಂದ ಇದು ಚಾಲನೆಯಲ್ಲಿದೆ" ಎಂದಷ್ಟೇ ಉತ್ತರಿಸಿದರು. ಅಧಿಕಾರಿಯು, "ಇನ್ನು ಮುಂದೆ ಸಾಧುವಿಗೆ ಪ್ರಸಾದವನ್ನು ಕೊಡಬಾರದು" ಎಂದು ಆಜ್ಞಾಪಿಸಿದರು. ಇದಾವುದನ್ನೂ ತಿಳಿಯದ ಸಾಧುಗಳು ಮಾರನೆಯ ದಿವಸ ಪ್ರಸಾದ ಬರದ ಕಾರಣವೇನೆಂದು ತಿಳಿಯಲು ಹೋದಾಗ, ಸಿಬ್ಬಂದಿವರ್ಗದವರು ಅಧಿಕಾರಿಯ ಆಜ್ಞೆಯನ್ನು ತಿಳಿಸಿದರು. ಸಾಧುಗಳು ನಸುನಕ್ಕು ಸುಮ್ಮನೆ ಹೊರಟುಹೋದರು. ಕೆಲವು ದಿವಸಗಳ ನಂತರ ಅಧಿಕಾರಿಯು ದೇವಸ್ಥಾನವನ್ನು ಪ್ರವೇಶಿಸುತ್ತಿರಲು, ಆಕಸ್ಮಿಕವಾಗಿ ಸಾಧುವಿಗೆ ಎದುರಾದರು. ಅಧಿಕಾರಿಯು, ಏನೂ ಮಾತಾಡದೆ ಸುಮ್ಮನಿರುವ ಸಾಧುಗಳು ಇವರೇ ಇರಬೇಕು ಎಂದು ಊಹಿಸಿ ಅವರನ್ನು, "ಏನು ಸ್ವಾಮಿ! ಸುಮ್ಮನೆ ಈ ರೀತಿ ಕಾಲ ಹರಣ ಮಾಡುವ ಬದಲಾಗಿ, ದುಡಿದು ಹಣ ಸಂಪಾದಿಸಿ ಸ್ವತಂತ್ರ ಜೀವನ ನಡೆಸಬಹುದಲ್ಲವೇ?" ಎಂದು ಪ್ರಶ್ನಿಸಿದರು; "ನಿಮ್ಮಂತಹವರಿಂದಲೇ ನಮ್ಮ ದೇಶಕ್ಕೆ ಈ ದುರ್ಗತಿ" ಎಂದು ಹಳಿದರು. ಸಾಧುಗಳು ಸೌಮ್ಯವಾಗಿ, "ನಾಳೆ ನನ್ನ ಹತ್ತಿರ ಬಂದು ಕೆಲವು ಕಾಲ ಸುಮ್ಮನೆ ಕುಳಿತಿರಲು ತಮಗೆ ಸಾಧ್ಯವೇ?" ಎಂದು ಪ್ರಶ್ನಿಸಿದರು. "ಅಷ್ಟೇನೆ? ನಾಳೆಯೇ ಬರುವೆ" ಎಂದರು ಆ ಅಧಿಕಾರಿ. ಸಾಧುಗಳು ಹೊರಟುಹೋದರು. ಮಾರನೆಯ ದಿವಸ ಅಧಿಕಾರಿಯು ಅವರ ಹತ್ತಿರ ಬಂದರು. ಆಗ ಸಾಧುಗಳು ಅಧಿಕಾರಿಯನ್ನು ಕುರಿತು, ತಮ್ಮ ಮುಂದೆ ಸುಮ್ಮನೆ ಕುಳಿತಿರಲು ತಿಳಿಸಿದರು. ಅದೇನು ಕಷ್ಟದ ಕೆಲಸ ಎಂದು ಅಣಕಿಸುವಂತೆ ಸಾಧುಗಳನ್ನು ನೋಡುತ್ತಾ ಅಧಿಕಾರಿ ಕುಳಿತರು. ಅರ್ಧ ಮುಕ್ಕಾಲು ಘಂಟೆಯಾಯಿತು. ಅಧಿಕಾರಿಗೆ ಇರಸು ಮುರಸು; ಚಡಪಡಿಸಲಾರಂಭಿಸಿದರು. ಇದನ್ನು ಕಂಡ ಸಾಧುಗಳು ನಿಯಮದಂತೆ ಸುಮ್ಮನಿರಲು ತಿಳಿಸಿದರು. ಸುಮಾರು ಒಂದೂವರೆ ಘಂಟೆಯಾಗಿರಬಹುದು, ಅಧಿಕಾರಿಗೆ ಇನ್ನು ಸುಮ್ಮನೆ ಕುಳಿತಿರಲು ಕಷ್ಟಸಾಧ್ಯವೆನಿಸಿತು. ಕೊಂಚ ಕ್ಷಣಗಳ ಬಳಿಕ, ಇನ್ನು ಸಾಧ್ಯವೇ ಇಲ್ಲವೆಂದು ಅರಿತು, ಸಾಧುಗಳ ಪಾದಕ್ಕೆ ಮಣಿದು ತಮ್ಮ ಅಸಹಾಯಕತೆಯನ್ನು ಹೇಳಿಕೊಂಡರು. ಆಗ ಸಾಧುಗಳು ನಸುನಕ್ಕು, "ಸಾಮಾನ್ಯವಾಗಿ ಯಾರಿಂದಲೂ ಸುಮ್ಮನೆ ಕುಳಿತಿರಲು ಸಾಧ್ಯವಿಲ್ಲ; ಸತ್ತಮನುಷ್ಯ ಅಥವಾ ನಿರ್ಮೋಹಿ, ವಾಸನಾರಹಿತನಾದವನು ಅಥವಾ ಭಗವಂತನಲ್ಲಿ ತನ್ಮಯನಾಗಿರುವವನು – ಇವರು ಮಾತ್ರವೇ ಸುಮ್ಮನೆ ಕುಳಿತಿರಲು ಸಾಧ್ಯ" ಎಂದು ತಿಳಿಸಿದರು. ಅದನ್ನರಿತ ಅಧಿಕಾರಿಯು ಕ್ಷಮಾಪಣೆಯನ್ನು ಕೇಳಿ ದೇವಸ್ಥಾನದ ಕಛೇರಿಗೆ ತೆರಳಿದರು. ಸಾಧುಗಳ ಪ್ರಸಾದವನ್ನು ಎರಡು ದೊನ್ನೆಗಳಿಂದ ನಾಲ್ಕು ದೊನ್ನೆಗಳಿಗೆ ದ್ವಿಗುಣಗೊಳಿಸಿದರು.



ಸಾಮಾನ್ಯರಿಗೆ ಕರ್ಮವು ಅನಿವಾರ್ಯ. ಮನೆಯಲ್ಲಿ ಏನಾದರೂ ಮಾಡುತ್ತಲೇ ಇರಲು ಇಚ್ಛಿಸುವ ವೃದ್ಧರನ್ನು ಕಂಡರೆ ನಮಗೆ ಇದು ತಿಳಿಯುತ್ತದೆ. ಆದ್ದರಿಂದಲೇ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ **'ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್'** ಎಂದು

ಹೇಳಿರುವುದು. ಯಾರೊಬ್ಬನೂ, ಒಂದು ಕ್ಷಣವೂ ಕರ್ಮ ಮಾಡದೆ ಸುಮ್ಮನಿರಲು ಸಾಧ್ಯವಿಲ್ಲ. ಆದರೆ ಕರ್ಮ ಮಾಡುವುದು ಅಷ್ಟು ಸುಲಭವೇ ಎಂದರೆ ಅದೂ ಇಲ್ಲ. **ಗಹನಾ ಕರ್ಮಣೋ ಗತಿಃ** – ಕರ್ಮದ ಗತಿಯು ಅತ್ಯಂತ ಗಹನವಾದುದು, ಆದರೆ ಕರ್ಮ ಮಾಡದೆ ವಿಧಿಯಿಲ್ಲ.

ಆಧ್ಯಾತ್ಮಿಕ ಸಾಧಕನೊಬ್ಬನು ರಮಣ ಮಹರ್ಷಿಗಳ ಬಳಿ ಸಾರಿ, "ಸ್ವಾಮಿ, ಆತ್ಮಸಾಕ್ಷಾತ್ಕಾರಕ್ಕೆ ನಾನು ಏನು ಮಾಡಬೇಕು?" ಎಂದು ಪ್ರಶ್ನಿಸಿದನು. ರಮಣರು ಉತ್ತರವಾಗಿ, "ನೀನು ಸುಮ್ಮನಿರಬೇಕು" ಎಂದರು. ಉತ್ತರವನ್ನು ಕೇಳಿದ ಸಾಧಕನು ಹೌಹಾರಿದನು. ಇದನ್ನು ಕಂಡ ರಮಣರು, "ನೋಡು, ಸಾಮಾನ್ಯವಾಗಿ ನಾವು ಸುಮ್ಮನೆ ಕುಳಿತಿರಲು ಸಾಧ್ಯವಿಲ್ಲ. ಸುಮ್ಮನೆ ಕುಳಿತಿರಲು ಪ್ರಯತ್ನಿಸಿದರೆ ಸೋಮಾರಿಗಳಾಗಿ ಕೆಟ್ಟ ಆಲೋಚನೆಗಳನ್ನು ಮಾಡುತ್ತೇವೆ. ಬದಲಾಗಿ ಸತ್ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೆ ಮಾಡಿದರೆ, ನೈಷ್ಕರ್ಮ್ಯವನ್ನು ಹೊಂದುತ್ತೇವೆ" ಎಂದು ಹೇಳಿದರು. ಇದೇ ಮಾತನ್ನು ಶ್ರೀರಾಮಕೃಷ್ಣರು ಗರ್ಭವತಿಯಾಗಿರುವ ಮಹಿಳೆಯ ಉದಾಹರಣೆಯೊಂದಿಗೆ ವಿವರಿಸುತ್ತಾರೆ. ಕಾಲಕ್ರಮೇಣ ಆಕೆಗೆ ಕೆಲಸವು ಕಡಿಮೆಯಾಗುತ್ತಾ ಹೋಗುತ್ತದೆ. ಮಗುವಿಗೆ ಜನ್ಮ ನೀಡಿದ ಮೇಲೆ ಮಗುವಿನ ಲಾಲನೆ–ಪಾಲನೆಯೊಂದೇ ಆಕೆಯ ಕೆಲಸ. ಅದೇ ರೀತಿ ಮನುಷ್ಯನು ತಮಸ್ಸಿನಿಂದ ರಜಸ್ಸು ಹಾಗೂ ಸತ್ವವನ್ನು ಪಡೆದು, ಆ ಬಳಿಕ ತ್ರಿಗುಣಾತೀತನಾಗಬೇಕು. ಇದಕ್ಕೆ ಕರ್ಮಯೋಗವು ಸಹಕಾರಿಯಾಗುತ್ತದೆ.

ಶ್ರೀರಾಮಕೃಷ್ಣರು ಕರ್ಮಯೋಗದ ಕುರಿತಾಗಿ ಹೇಳಿದ ಮಾತು ಮಾರ್ಮಿಕವಾಗಿದೆ: "ನೀವು ಕೆಲಸವನ್ನು ಒಮ್ಮೆಲೇ ಬಿಡುವುದಕ್ಕೆ ಆಗುವುದಿಲ್ಲ. ಪ್ರಕೃತಿ ನಿಮ್ಮಿಂದ ಕೆಲಸ ಮಾಡಿಸುವುದು. ಆದಕಾರಣ ಕೆಲಸ ಮಾಡೋಣ. ಅನಾಸಕ್ತಿಯಿಂದ ಕೆಲಸ ಮಾಡಿದರೆ ಅದು ದೇವರೆಡೆಗೆ ನಮ್ಮನ್ನು ಒಯ್ಯುವುದು. ಅನಾಸಕ್ತಿಯಿಂದ ಕೆಲಸ ಮಾಡುವುದು ಎಂದರೆ ಯಾವ ಅಂಜಿಕೆ ಮತ್ತು ಈ ಜನ್ಮದಲ್ಲಿ ಅಥವಾ ಮುಂದಿನ ಜನ್ಮದಲ್ಲಿ ಸಿಗುವ ಪ್ರತಿಫಲದಾಸೆಗೆ ಕೆಲಸ ಮಾಡದೆ ಇರುವುದು. ಹೀಗೆ ಮಾಡಿದ ಕರ್ಮ ಮೋಕ್ಷಕ್ಕೆ ದಾರಿ. ಆ ಮೋಕ್ಷವೇ ದೇವರು."

ಭೌತಿಕ, ಮಾನಸಿಕ ಮತ್ತು ಬೌದ್ಧಿಕ ಕ್ರಿಯೆಗಳನ್ನು 'ಕರ್ಮ'ವೆನ್ನಬಹುದು. ಶ್ರೀರಾಮಕೃಷ್ಣರು ಇದರ ಜೊತೆಗೆ ಉಪಾಸನೆ, ಅಷ್ಟಾಂಗ ಯೋಗಾಭ್ಯಾಸ ಇತ್ಯಾದಿಗಳನ್ನೂ ಕರ್ಮವೆಂದು ಪರಿಗಣಿಸುತ್ತಾರೆ.

'ಬಿತ್ತಿದಂತೆ ಬೆಳೆ ಸುಳ್ಳಲ್ಲ' ಎಂಬಂತೆ ನಾವು ಮಾಡುವ ಕ್ರಿಯೆ, ಆಲೋಚನೆಗಳ ಮೊತ್ತವೇ ನಮ್ಮ ವ್ಯಕ್ತಿತ್ವ. ಹಾಗಾಗಿ ನಮ್ಮ ಕ್ರಿಯೆ–ಆಲೋಚನೆಗಳ ಕುರಿತು ನಾವು ಬಹಳ ಎಚ್ಚರದಿಂದಿರಬೇಕು. ಇಂದಿನ ನಮ್ಮ ಸ್ಥಿತಿಗೆ ನಮ್ಮ ಪೂರ್ವಕರ್ಮಗಳೇ ಕಾರಣ. ಹಾಗೆಯೇ ಇಂದು ಮಾಡುವ ಕರ್ಮಗಳು ನಮ್ಮ ಮುಂದಿನ ಜೀವನವನ್ನು ರೂಪಿಸುತ್ತವೆ. ಫಲಾಸಕ್ತಿಯಿಂದ ಕರ್ಮಗಳನ್ನು ಮಾಡಿದರೆ, ನಮ್ಮನ್ನು ಅದು ಬಂಧಿಸುತ್ತವೆ. ಬಂಧನವು ಬಂಗಾರದ ಸರಪಳಿಯದಾಗಿರಬಹುದು ಅಥವಾ ಕಬ್ಬಿಣದ ಸರಪಳಿಯದಾಗಿರಬಹುದು; ಬಂಧನ ಬಂಧನವೇ. ಫಲಾಪೇಕ್ಷೆಯಿಂದ ಒಳ್ಳೆಯ ಅಥವಾ ಕೆಟ್ಟ ಕೆಲಸಗಳನ್ನು ಮಾಡಿದಲ್ಲಿ ಬಂಧನವು ತಪ್ಪಿದ್ದಲ್ಲ. ಇಂಥ ಬಂಧನದಿಂದ ಪಾರಾಗುವುದಕ್ಕೆ ಕರ್ಮಯೋಗವೊಂದೇ ಮಾರ್ಗ.

ಶ್ರೀರಾಮಕೃಷ್ಣರು ಕರ್ಮಯೋಗವನ್ನು ಹೀಗೆ ವಿವರಿಸುತ್ತಾರೆ: "ಕರ್ಮಯೋಗವೆಂದರೆ ಕರ್ಮದ ಮೂಲಕ ದೇವರೊಂದಿಗೆ ಸಂಬಂಧವನ್ನು ಕಲ್ಪಿಸಿಕೊಳ್ಳುವುದು. ಅನಾಸಕ್ತಿಯಿಂದ ಅಷ್ಟಾಂಗಯೋಗ ಅಥವಾ ರಾಜಯೋಗವನ್ನು ಅಭ್ಯಾಸ ಮಾಡಿದರೆ ಅದು ಕರ್ಮಯೋಗ. ಇದು ಏಕಾಗ್ರತೆ ಮತ್ತು ಧ್ಯಾನದ ಮೂಲಕ ಐಕ್ಯತೆಗೆ ಒಯ್ಯುತ್ತದೆ. ಗೃಹಸ್ಥ ಕರ್ಮಗಳನ್ನು (ಅಂದರೆ, ತನಗೆ ಅಥವಾ ಪರೋಪಕಾರಕ್ಕೆ ಮಾಡುವ ಲೌಕಿಕ ಕಾರ್ಯಗಳು) ದೇವರ ಪ್ರೀತ್ಯರ್ಥವಾಗಿ ಅನಾಸಕ್ತಿಯಿಂದ ಮಾಡಿದರೆ ಅದು ಕರ್ಮಯೋಗ. ಇತರ ಯೋಗಗಳಂತೆ ಕರ್ಮಯೋಗದ ಗುರಿಯೂ ಕೂಡ ಸಾಕಾರ ಅಥವಾ ನಿರಾಕಾರ ದೇವರನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಆಗಿದೆ."

ಅನಾಸಕ್ತಿಯಿಂದ ಕರ್ಮಗಳನ್ನು ಮಾಡುವುದು ಎಂದರೆ ಬೇಜವಾಬ್ದಾರಿಯಿಂದ ಮಾಡುವುದು ಎಂದಲ್ಲ. ಶ್ರೀಕೃಷ್ಣನು ಹೇಳುವಂತೆ ಆಸಕ್ತನು ಕರ್ಮಗಳನ್ನು ಮಾಡುವ ರೀತಿಯಲ್ಲೇ ಅನಾಸಕ್ತನೂ ಕರ್ಮಗಳನ್ನು ಮಾಡಬೇಕು. ಆದರೆ ಫಲದ ಅಪೇಕ್ಷೆ ಇರಬಾರದು. ಅನಾಸಕ್ತಿಯೆಂದರೆ 'ನಾನು' ಮತ್ತು 'ನನ್ನದು' ಎಂಬ ಭಾವನೆಯಿಲ್ಲದಿರುವುದು. ಉದಾಹರಣೆಗೆ ಪರಿಚಯಸ್ಥರ ಮಗನೊಬ್ಬನು ಸತ್ತನೆಂದು ತಿಳಿದು ನಮಗೆ 'ಅಯ್ಯೋ ಪಾಪ' ಎನ್ನಿಸುತ್ತದೆ. ಸಂಬಂಧಿಕರ ಪುತ್ರನೊಬ್ಬನು ಸತ್ತಲ್ಲಿ ಮನಸ್ಸಿಗೆ ಸ್ವಲ್ಪ ನೋವುಂಟಾಗುತ್ತದೆ. ಆದರೆ ನಮ್ಮ ಮಗನೇ ಸತ್ತರೆ ದುಃಖವು ಮುಗಿಲನ್ನು ಮುಟ್ಟುತ್ತದೆ. ಕಾರಣ ಮೊದಲಿನ ಸಂದರ್ಭದಲ್ಲಿ, 'ಅವರು ನನ್ನವರು' ಎಂಬ ಭಾವನೆಯಿಲ್ಲದಿರುವುದು. ಎರಡನೆಯ ಪರಿಸ್ಥಿತಿಯಲ್ಲಿ 'ನಮ್ಮವರು' ಎನ್ನುವ ಭಾವನೆಯಿರುವ ಕಾರಣ ಸ್ವಲ್ಪ ದುಃಖವುಂಟಾಗುತ್ತದೆ. ಆದರೆ ನಮ್ಮವರೇ ಸತ್ತಾಗ ನಾವೇ ಸತ್ತಂತೆ ಭಾಸವಾಗುವ ಕಾರಣ ಬಹಳ ದುಃಖವುಂಟಾಗುತ್ತದೆ. ಆದ್ದರಿಂದ ಕರ್ತೃತ್ವಭಾವನೆ ಮತ್ತು ಭೋಕ್ತೃತ್ವಭಾವನೆ – ಎರಡು ಭಾವನೆಗಳನ್ನು ತ್ಯಜಿಸಿದಲ್ಲಿ, ಕರ್ಮವು ನಮ್ಮನ್ನು ಬಂಧಿಸುವುದಿಲ್ಲ.

ಇದರ ಅಭ್ಯಾಸಕ್ರಮವನ್ನು ಮೂರು ವಿಧಗಳಲ್ಲಿ ಮಾಡಬಹುದು. ಮೊದಲನೆಯದಾಗಿ ನಮ್ಮ ನೈಜ ಸ್ವರೂಪವನ್ನು, ಅಂದರೆ ನಾವು ಅಕರ್ತೃ, ಅಭೋಕ್ತೃ ಎಂದು ತಿಳಿದುಕೊಳ್ಳಬೇಕು. ಕರ್ಮಗಳನ್ನು ಪ್ರಕೃತಿಯಿಂದಾದ ಇಂದ್ರಿಯ, ಮನಸ್ಸು, ಬುದ್ಧಿಗಳು

ಮಾಡುತ್ತಿವೆ ಎಂದರಿತು, ಅದರಿಂದ ಉಂಟಾದ ಕಾರ್ಯವು ಪ್ರಕೃತಿಗೇ ಸೇರಿದ್ದು ಎಂದು ತಿಳಿದು ಅನಾಸಕ್ತಿಯಿಂದಿರಬೇಕು. ಎರಡನೆಯದು, ಶ್ರೀರಾಮಕೃಷ್ಣರು ಹೇಳುವಂತೆ, "ತಾಯಿ, ನಾನು ಯಂತ್ರ, ನೀನು ಯಂತ್ರಿ. ನೀನು ನಡೆಸಿದ ಹಾಗೆ ನಾನು ನಡೆಯುತ್ತೇನೆ. ಭಗವಂತನು ಸೂತ್ರಧಾರ, ನಾವು ಅವನ ಕೈಗೊಂಬೆಗಳು" ಎಂಬ ತಾತ್ತ್ವಿಕ ನಿರ್ಧಾರ. ಮೂರನೆಯದಾಗಿ, ಭಗವಂತನ ಸೇವಕನ ಭಾವನೆಯಿಂದ ಕೆಲಸಗಳನ್ನು ಮಾಡುತ್ತಾ, ಫಲವನ್ನು ಈಶ್ವರನಿಗೆ ಅರ್ಪಿಸುವುದು.

ಶ್ರೀರಾಮಕೃಷ್ಣರೂ ಸೇರಿದಂತೆ ಶಾಸ್ತ್ರಗಳು ಮತ್ತು ಎಲ್ಲಾ ಸಾಧು-ಸಂತರು ತಿಳಿಸಿರುವಂತೆ ಮನುಷ್ಯಜನ್ಮದ ಗುರಿ ಭಗವಂತನ ಸಾಕ್ಷಾತ್ಕಾರ. ಮೋಕ್ಷವನ್ನೇ ಎಲ್ಲರೂ ಏಕೆ ಗುರಿಯನ್ನಾಗಿಸಿಕೊಳ್ಳಬೇಕೆಂದು ಕೆಲವರ ಆಕ್ಷೇಪ. ನಾವು ಒಳ್ಳೆಯ ಮನುಷ್ಯರಾಗಿದ್ದರೆ ಸಾಲದೇ ಎಂದು ಅವರ ವಾದ. ಮೋಕ್ಷ ಅಥವಾ ಮುಕ್ತಿಯೆಂದರೆ ಸ್ವಾತಂತ್ರ್ಯ. ಪ್ರತಿಯೊಂದು ಪ್ರಾಣಿಯೂ ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತದೆ. ಚಿಕ್ಕ ಮಗುವೂ ಕೂಡ ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದರೆ ಅದರದೇ ಆದ ರೀತಿಯಲ್ಲಿ ಪ್ರತಿಭಟಿಸುತ್ತದೆ. ನಿಜವಾಗಿ ಸ್ವತಂತ್ರನಾಗಿರುವವನು ಯಾರು? ಸಂಪತ್ತು, ಅಧಿಕಾರ ಯಾವುದೂ ಶಾಶ್ವತವಲ್ಲ. ಆದ್ದರಿಂದ ಅವುಗಳನ್ನು ಹೊಂದಿರುವವನು ಸ್ವತಂತ್ರನಲ್ಲ. ಸುಖ-ದುಃಖ, ನೋವು-ನಲಿವು, ಲಾಭ-ನಷ್ಟವೆಂಬ ದ್ವಂದ್ವಗಳಿಂದ ಅತೀತನೂ, ತನ್ನಲ್ಲಿಯೇ ತಾನಿರುವವನು ಮಾತ್ರವೇ ಸ್ವತಂತ್ರನು. ಆ ಸ್ಥಿತಿಯನ್ನೇ 'ಮೋಕ್ಷ'ವೆಂದು ಕರೆಯುವರು. ಒಟ್ಟಿನಲ್ಲಿ ಮೋಕ್ಷವೆಂದರೆ ಸಂಪೂರ್ಣ ಸ್ವಾತಂತ್ರ್ಯ.

ಮೋಕ್ಷಕ್ಕೆ ದೇವರು ಅಗತ್ಯವೇ? ಆಧ್ಯಾತ್ಮಿಕ ಸಾಧಕರಿಗೆ ದೇವರ ಸಹಾಯ, ಕೃಪೆ ಅತ್ಯವಶ್ಯಕ. ಮನುಷ್ಯ ಎಷ್ಟೇ ಬುದ್ಧಿವಂತನಾದರೂ ಅವನ ದೃಷ್ಟಿ ಸೀಮಿತ, ಅವನ ಶಕ್ತಿಯೂ ಕೂಡ ಸೀಮಿತ. ಅಸೀಮವಾದದ್ದನ್ನು ಸೀಮಿತನಾದವನು ಸ್ವತಂತ್ರವಾಗಿ ಪಡೆಯಲು ಸಾಧ್ಯವಿಲ್ಲ. ಸೀಮಿತನಾದ ಮನುಷ್ಯನು ಅಸೀಮನಾದ ಭಗವಂತನ ಸಹಾಯದಿಂದ ಮಾತ್ರ ಅಸೀಮವಾದ ಮುಕ್ತಿಯನ್ನು ಪಡೆಯಲು ಸಾಧ್ಯ.

"ಕರ್ಮಕ್ಕಾಗಿ ಕರ್ಮವನ್ನು ಮಾಡೋಣ. ನಮಗೆ ಯಾವ ಫಲವೂ ಬೇಡ. ತನ್ನಂತೆಯೇ ಇತರರು ಎಂದು ಭಾವಿಸಿ ಪರರಿಗೆ ಸಹಾಯ ಮಾಡೋಣ. ದೇವರು, ಮೋಕ್ಷ – ಎಲ್ಲ ಏಕೆ ಸ್ವಾಮಿ?" ಎಂದು ಕೆಲವರು ಹೇಳುತ್ತಾರೆ. ಮಹತ್ತರ ಗುರಿಯಿಲ್ಲದೆ ಮನುಷ್ಯನು ಹೆಚ್ಚು ಕಾಲ ಮುಂದುವರೆಯಲಾರ. ಅಲ್ಲದೆ. ಅಧಿಕಾರ, ಸಂಪತ್ತು ಇತ್ಯಾದಿಗಳು ನಮ್ಮನ್ನು ದಾರಿ ತಪ್ಪಿಸುತ್ತವೆ. ಈಗಿನ ಸಮಾಜಸೇವಕರು, ರಾಜಕಾರಣಿಗಳೇ ಇದಕ್ಕೆ ಸಾಕ್ಷಿ. ಕರ್ಮಕ್ಕಾಗಿ ಕರ್ಮ ಅಥವಾ ಸಮಾಜಸೇವೆಯನ್ನು ಮಾಡುವವರನ್ನು ಕುರಿತು ಶ್ರೀರಾಮಕೃಷ್ಣರು ಎಚ್ಚರಿಸುತ್ತಾರೆ. ಶುದ್ಧ ಸಾತ್ವಿಕರು ಸೇವೆಯನ್ನು ಮಾಡಬಲ್ಲರು. ಸತ್ವದೊಂದಿಗೆ ರಜಸ್ಸು ಬೆರತಿದ್ದರೆ, ಕ್ರಮೇಣ ಸೇವಾಭಾವನೆಯ ಬದಲು, "ನಾನು ಪ್ರಪಂಚಕ್ಕೆ ಒಳ್ಳೆಯದನ್ನು ಮಾಡುತ್ತಿದ್ದೇನೆ" ಎಂಬ ಅಹಂಕಾರವು ಬರುತ್ತದೆ. ಇದರಿಂದ ಮನುಷ್ಯನು ತನ್ನ ಮಾರ್ಗದಿಂದ ವಿಮುಖನಾಗುತ್ತಾನೆ. ಅವನು ಸೇವೆಯನ್ನು ಮಾಡುವುದರ ಜೊತೆಗೆ ತನ್ನ ಅಹಂಕಾರವನ್ನೂ ಪುಷ್ಟಿಗೊಳಿಸಿಕೊಳ್ಳುತ್ತಾನೆ. ಆಸ್ತಿಕನಾದವನಿಗೆ, ಮೋಕ್ಷಾಕಾಂಕ್ಷಿಗೆ ಈ ಅಪಾಯವು ಉಂಟಾಗುವುದಿಲ್ಲವೆ ಎಂದರೆ, ನಿಶ್ಚಯವಾಗಿ ಆಗುತ್ತದೆ. ಆದರೆ ದೇವರ ಸಹಾಯದಿಂದ ಈ ಅಪಾಯಗಳಿಂದ ಪಾರಾಗುವುದು ಅವನಿಗೆ ಸುಲಭಸಾಧ್ಯವಾಗುತ್ತದೆ. ಹುಳುವು ತನ್ನ ಮುಂದಿನ ಕಾಲನ್ನು ಮಂಡಿಯೂರಿ ಹಿಂದಿನದನ್ನು ತೆಗೆಯುತ್ತದೆ. ಬಳ್ಳಿಯು ಸ್ವತಂತ್ರವಾಗಿ ನಿಲ್ಲಲು ಸಾಧ್ಯವಿಲ್ಲ. ಅದೇ ರೀತಿ ನಮ್ಮ ಮನಸ್ಸು ಸ್ವತಂತ್ರವಾಗಿ ನಿಲ್ಲಲು ಸಾಧ್ಯವಿಲ್ಲ. ಅದಕ್ಕೆ ಆಸರೆಯೊಂದು ಬೇಕು. ದೇವರು, ಮೋಕ್ಷವೆಂಬ ಗುರಿ ಮನಸ್ಸಿಗೆ ಆಸರೆ ಎಂದು ಹೇಳಿದರೂ ತಪ್ಪಾಗುವುದಿಲ್ಲ. ಇದರಿಂದ ನಾವು ನಮ್ಮ ಅಂತಿಮ ಗುರಿಯನ್ನು ಸುಲಭವಾಗಿ ಮುಟ್ಟಬಹುದು. ಕರ್ಮಕ್ಕೆ ತಾನೇ ಸ್ವತಃ ನಿಂತುಕೊಳ್ಳಲು ಕಾಲಿಲ್ಲ ಎನ್ನುತ್ತಾರೆ ಶ್ರೀರಾಮಕೃಷ್ಣರು.

ಶ್ರೀರಾಮಕೃಷ್ಣರ ಪ್ರಕಾರ ಈ ಯುಗದಲ್ಲಿ 'ಅನಾಸಕ್ತಿಯೋಗ' ಬಹಳ ಕಷ್ಟ. ಆದಕಾರಣ ದೇವರನ್ನು ಕರ್ಮ, ಜ್ಞಾನ ಅಥವಾ ಸಿದ್ಧಾಂತಗಳಿಗಿಂತ ಹೆಚ್ಚಾಗಿ ಪ್ರಾರ್ಥನೆ, ಭಕ್ತಿ ಮತ್ತು ಪ್ರೇಮಗಳಿಂದ ಒಲಿಸಿಕೊಳ್ಳುವುದು ಸುಲಭವೆಂದು ಅವರು ಹೇಳುತ್ತಾರೆ. ಆದರೆ ಕರ್ಮಯೋಗವನ್ನು ಯಾರೂ ಅಲ್ಲಗಳೆಯಲಾರರು. ಅದು ಅತ್ಯವಶ್ಯಕ. ಶ್ರೀರಾಮಕೃಷ್ಣರು, "ಭಕ್ತಿಯಿಂದ ಕರ್ಮಯೋಗದ ಅಭ್ಯಾಸವು ಸುಲಭವಾಗುವುದು" ಎಂದು ತಿಳಿಸುತ್ತಾರೆ. ದೇವರ ಮೇಲೆ ಇಡುವ ಭಕ್ತಿ ಅಥವಾ ಪ್ರೇಮದಿಂದ ಕರ್ಮಯೋಗವು ಅನಾಯಾಸವಾಗುವುದು. ಭಗವಂತನ ಮೇಲಿನ ಪ್ರೇಮವು ನಾವು ಮಾಡುವ ಕೆಲಸಗಳನ್ನು ಹಗುರವಾಗಿಸುತ್ತದೆ. ಹಾಗೆಯೇ ಅನಾಸಕ್ತಿಯಿಂದ ಕೆಲಸ ಮಾಡುವುದಕ್ಕೂ ಇದು ಸಹಾಯಮಾಡುತ್ತದೆ.

ಬಹಳ ಉತ್ಸಾಹಶಾಲಿ ಸಮಾಜಸುಧಾರಕರ ಒಂದು ಗುಂಪಿನೊಂದಿಗೆ ಮಾತನಾಡುತ್ತ ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ಏನೋ ಪ್ರಪಂಚಕ್ಕೆ ದೊಡ್ಡ ಸಹಾಯವನ್ನು ಮಾಡುವಂತೆ ನೀವು ಮಾತನಾಡುತ್ತಿರುವಿರಲ್ಲ. ನೀವು ಒಳ್ಳೆಯದನ್ನು ಮಾಡಬೇಕೆಂದು ಬಯಸುವ ಪ್ರಪಂಚ ಅಷ್ಟು ಸಣ್ಣದೆ? ಎರಡನೆಯದಾಗಿ, ಪ್ರಪಂಚಕ್ಕೆ ಸಹಾಯ ಮಾಡಬೇಕೆಂದು ನೀವು ಬಯಸುತ್ತೀರಲ್ಲ, ಅದನ್ನು ಮಾಡಲು ನೀವು ಯಾರು? ಮೊದಲು ಸಾಧನೆ ಮಾಡಿ ದೇವರನ್ನು ಕಂಡುಕೊಳ್ಳಿ, ಆಗ ಮಾತ್ರ ನಿಮಗೆ ಸ್ಫೂರ್ತಿ ಮತ್ತು ಶಕ್ತಿ ಬರುತ್ತದೆ. ಆಗ ಪ್ರಪಂಚಕ್ಕೆ ಒಳ್ಳೆಯದು ಮಾಡುವುದನ್ನು ಕುರಿತು ನೀವು ಮಾತನಾಡಬಹುದು. ಅಲ್ಲಿಯವರೆಗೆ ಮಾತನಾಡಬೇಡಿ." ಹಾಗಾದರೆ ನಾವು ಒಳ್ಳೆಯ ಕೆಲಸಗಳನ್ನು ಅಥವಾ ಕರ್ಮಗಳನ್ನು ದೇವರ ಸಾಕ್ಷಾತ್ಕಾರವಾಗದವರೆಗೆ ಮಾಡಲೇಬಾರದೇ? ಹಾಗೇನೂ ಇಲ್ಲ. ಅವುಗಳನ್ನು ಸೇವಾಮನೋಭಾವದಿಂದ, ಈಶ್ವರಾರ್ಪಣಬುದ್ಧಿಯಿಂದ ಮಾಡಬೇಕೇ ಹೊರತು ಜಗತ್ತನ್ನು ಉದ್ಧಾರ ಮಾಡುವ